e) whether is it a fact that the Bangalore Development Authority has again allotted CA site No. 3 measuring 250' x 125' recently to the same Club and if so, state the reason for further allotment ?

f) whether any limit is fixed to acquire sites by any club ?

A. LAKSHMISAGAR (Minister for Urban Development).—

a) Two sites are allotted, but possession given in only one case.

b) The Dimension of the two sites are,

1. CA site No. 4—205' x 125'
2. CA site No. 3—250' x 125'

c) The amount received so far towards CA site No. 4 is Rs. 42,210 and towards CA site No. 3 is Rs. 77,224 Total Rs. 1,19,434.

d) Yes.

e) CA site No. 4 was allotted first to the Club. Since the Club represented that the CA site No. 4 allotted in the first instance was insufficient for constructing swimming pool and laying out a Rock Garden, the authority resolved to allot CA site No. 3 also.

f) No.

ಶ್ರೀ ಐ. ಬಿ. ಶಂಕರ್.—ಮಾನ್ಯ ಅಧ್ಯಕ್ಷರೇ ಪೌರಸೌಲಭ್ಯಕ್ಕಾಗಿ ಕೊಟ್ಟಿರುವ ಆ ಜಾಗವನ್ನು, ವಿಜಯನಗರ ಕ್ಲಬ್‌ಗೆ ಕೊಟ್ಟಿರುವುದು ತಪ್ಪಲ್ಲವೇ ?

ಶ್ರೀ ಎ. ಲಕ್ಷ್ಮೀಸಾಗರ್.—ಕಾನೂನು ಪ್ರಕಾರ ಅವರಿಗೆ ಕೊಟ್ಟಿದ್ದಾರೆ. ಆಸಂದರ್ಭದಲ್ಲಿ ಈ ರೀತಿ ಆಗಬಾರದು ಎಂದು ಕಾನೂನು ಬದಲಾವಣೆ ಏನೂ ಆಗಿರಲಿಲ್ಲ.

ಗೋಕಾಕ್ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಯೋಜನೆ

೭೦೯ (ಸಿ) ಶ್ರೀ ಎಂ.ಎಲ್. ಮುತ್ತಣ್ಣವರ್ (ಗೋಕಾಕ್).—ಮಾನ್ಯ ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ಪಕ್ಷ್ಸ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೫-೮೬ರಲ್ಲಿ ಗೋಕಾಕ್ ತಾಲ್ಲೂಕಿನಲ್ಲಿ ಎನ್.ಆರ್.ಡಬ್ಲ್ಯೂ.ಎಸ್ ಅಡಿಯಲ್ಲಿ ಮಂಜೂರಾದ ಗ್ರಾಮಗಳು ಯಾವುವು ?

ಆ) ಮಿನಿವಾಟರ್ ಸರಬರಾಜು ಯೋಜನೆ ಮೇರೆಗೆ ಮಂಜೂರಾದ ಗ್ರಾಮಗಳು ಯಾವುವು ?

ಇ) ಅವುಗಳಲ್ಲಿ ಎಷ್ಟು ಪೂರ್ತಿ ಕೆಲಸ ಮುಗಿದಿರುತ್ತವೆ.

ಈ) ಅಪೂರ್ಣ ಇದ್ದ ಕೆಲಸಗಳು ಯಾವುವು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ಪಕ್ಷ್ಸ ಮಂತ್ರಿಗಳು).

ಅ) ೧) ತುಕನಟ್ಟಿ (ಎನ್‌ಆರ್‌ಡಬ್ಲ್ಯೂ)
೨) ದುಪದಾಳ್ (ವಿಆರ್‌ಡಬ್ಲ್ಯೂ)
೩) ಎಂ. ಶಿವಾಪುರ ,,
೪) ಆದಿಬೆಟ್ಟ, ಉಪ್ಪಾರಟ್ಟಿ, ಮೊಲದಿನ್ನಿ

ಆ) ೧) ಹುಣಶ್ಯಾಳ ಪಿ.ಜಿ.
೨) ಬೆಟಗೇರಿ
೩) ಧರ್ಮಟ್ಟಿ
೪) ಕುಂದರಗಿ
೫) ಸುಲದಾಳ
೬) ಶೀಗೀಹಳ್ಳಿ
೭) ಗುಜನಾಳ
೮) ಬಿಸಲಗುಂದಿ
೯) ಮಲ್ಲಾಪುರ ಎಸ್.ಎ.

ಇ) ೧) ಕುಂದರಗಿ
೨) ಬೆಟಗೇರಿ
೩) ಸುಲದಾಳ
೪) ಹುಣಶ್ಯಾಳ ಪಿ.ಜಿ.
೫) ಗುಜನಾಳ
೬) ಮಲ್ಲಾಪುರ ಎಸ್.ಎ.
೭) ಬಿಸಲಗುಂದಿ

ಈ) ೧) ತುಕನಟ್ಟಿ ಗ್ರಾಮ (ಎನ್‌ಆರ್‌ಡಬ್ಲ್ಯೂಎಸ್)
೨) ಧುಪದಾಳ್ (ಎಆರ್‌ಡಬ್ಲ್ಯೂಎಸ್.)
೩) ಶಿವಾಪುರ ಎಂ. ,,
೪) ಉಪಾರಟ್ಟಿ, ಮೂಲದಿನ್ನಿ ಆದಿಬಿಟ್ಟಿ ,,
೫) ಧರ್ಮಟ್ಟಿ ಕೆರು ನೀರು ಸರಬರಾಜು
೬) ಶೀಗೀಹಳ್ಳಿ ಯೋಜನೆಗಳು.

ಶ್ರೀ ಎಂ. ಎಲ್. ಮುತ್ತಣ್ಣನವರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಹೇಳಿದಂತೆ ಈ ಬಗ್ಗೆ ಕೆಲವೊಂದು ಕಿರುಯೋಜನೆಗಳು ಮುಗಿದಿದ್ದರೂ ಕೂಡ ಆ ಹಳ್ಳಿಗಳಿಗೆ ಕುಡಿಯಲು ನೀರು ಇಲ್ಲದಂಥ ಪ್ರಸಂಗ ಆಗಿದೆ ಎನ್ನುವುದನ್ನು ಅವರು ಗಮನಿಸಬೇಕು. ಸರಿಯಾಗಿ ನೀರು ಪೂರೈಕೆ ಆಗುತ್ತಾ ಇಲ್ಲ. ಅದರ ಬಗ್ಗೆ ಸರಿಯಾದ ವ್ಯವಸ್ಥೆ ಆಗಬೇಕು. ಎರಡನೆದಾಗಿ ಎನ್‌ಆರ್ ಡಬ್ಲ್ಯೂಎಸ್ ಸ್ಕೀಂನಲ್ಲಿ ಕೆಲವು ಕೆಲಸಗಳನ್ನು ಚಾಲು ಮಾಡಿದ್ದೀರಿ. ಆದರೆ ಆ ಕೆಲಸ ಸರಿಯಾಗಿ ಪ್ರಗತಿ ಆಗುತ್ತಾ ಇರುವುದು ಕಂಡುಬಂದಿಲ್ಲ. ಅದರ ಬಗ್ಗೆ ತಾವು ಏನು ಮಾಡುತ್ತೀರಿ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಈ ಯೋಜನೆಗಳಿಗೆ ಮೂರನೇ ಒಂದು ಭಾಗದಷ್ಟು ಹಣವನ್ನು ನಾವು ಒದಗಿಸಿದ್ದೇವೆ. ಅದಕ್ಕೆ ಇನ್ನೂ ಹೆಚ್ಚು ಹಣವನ್ನು ಒದಗಿಸಿ ಕೆಲಸ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಇನ್ನು ಉಪಾರಟ್ಟಿ, ಮೂಲದಿನ್ನಿ ಆದಿಬಿಟ್ಟಿ, ಧರ್ಮಟ್ಟಿ, ಶೀಗೀಹಳ್ಳಿ ಈ ಯೋಜನೆಗಳನ್ನು ಮಾಡಬೇಕಾದರೆ ೧೬-೧೭ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಈಗ ಈ ಬಗ್ಗೆ ಎರಡು ಯೋಜನೆಗಳನ್ನು ಏನು ಮಂಜೂರು ಮಾಡಿದ್ದೇವೆ, ಈ ಕಿರು ಯೋಜನೆಗಳಿಗೆ ಎಲ್ಲೆಲ್ಲಿ ಏನೇನು ಕೆಲಸವಾಗಬೇಕೋ ಅದನ್ನು ನಮ್ಮ ಅಧಿಕಾರಿಗಳಿಗೆ ಹೇಳಿ ಮಾಡಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಂ.ಎಲ್. ಮುತ್ತಣ್ಣನವರ್.—ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದೇನೆಂದರೆ ಕೆಲವು ಹಳ್ಳಿಗಳು ಇತ್ತ ಕಡೆ ಜಿಲ್ಲಾ ಪರಿಷತ್‌ಗೂ ಸೇರಿಲ್ಲ, ಅತ್ತ ಮಂಡಲ ಪಂಚಾಯತ್‌ಗೂ ಸೇರಿಲ್ಲ, ಹೀಗಾಗಿ ಆ ಹಳ್ಳಿಗಳಲ್ಲಿರುವ ಜನರಿಗೆ ಕುಡಿಯಲು ನೀರೇ ಇಲ್ಲ. ಇಂಥ ಹಳ್ಳಿಗಳಿಗೆ ಕುಡಿಯುವ ನೀರಿನ ಸೌಲಭ್ಯ ಮಾಡಿಕೊಡುವುದಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಆ ಹಳ್ಳಿಗಳನ್ನು ಜಿಲ್ಲಾ ಪರಿಷತ್ ಒಳಗೆ ಬರುವಂತೆ ಮಾಡುತ್ತೇನೆ.